ಪ್ರಸ್ತುತ ಹೆಂಡತಿಗೆ ಸ್ಯಾಮ್ ಆಗಲೀ, ಅವನ ಮದುವೆಯಾಗಲೀ ಬೇಕಾಗಿಲ್ಲ. ಉಪಚಾರಕ್ಕೂ ಇವನನ್ನು ಮಾತನಾಡಿಸುತ್ತಿರಲಿಲ್ಲ.

ಅವನ ತಾಯಿ ಬೆಲಿಂಡಾ ಮತ್ತೆ ಮದುವೆಯಾಗಲಿಲ್ಲ. ಸ್ವಾಭಾವಿಕವಾಗಿ ಅವಳಿಗೆ ಮಗನ ಮೇಲೆ ಮಮತೆ. ಮಗನಿಗೂ ಹಾಗೆಯೇ. ತನ್ನನ್ನು ಮೇಲೆ ತರಲು ಅಷ್ಟುದಿನ ಗಂಡನನ್ನು ಸಹಿಸಿಕೊಂಡ ತಾಯಿಯ ಮೇಲೆ ಕರುಣೆ. ಆದರೆ, ಅವಳಿಗೆ ಗುಪ್ತ ಪ್ರೇಮಿಯೊಬ್ಬನಿದ್ದ. ಹೆಸರು ಜಾರ್ಜ್. ವಿಚ್ಛೇದನದ ನಂತರ ಬೆಲಿಂಡಾ ಸಿಡ್ನಿಯ ಹೊರಭಾಗದಲ್ಲಿ ನೆಲೆಸಿದಳು. ಅಪ್ಪ ಅಮ್ಮ ಇಬ್ಬರಿಗೂ ಬೇರೆಯಾದದ್ದು ಹಿತ ಎನಿಸಿರಬೇಕು. ಮಗನಿಗೆ ಎಷ್ಟೋ ಬಾರಿ ಅನ್ನಿಸಿತು, ಇವರು ಕೇವಲ ದೇಹಸುಖಕ್ಕೆ ಮದುವೆಯಾದರೆ? ಆ ಸುಖವನ್ನು ಯಾರುಕೊಟ್ಟರೇನೀಗ? ಅಪ್ಪ ಸಹೋದ್ಯೋಗಿಯೊಡನೆಯ ಪ್ರೇಮ ಕುದುರುವವರೆಗೆ ಅಮ್ಮನೊಡನೆ ಬಲಾತ್ಕಾರವಾಗಿ ಇದ್ದನೇ? ವಿಚ್ಛೇದನ, ಸಂಬಂಧ ಮತ್ತು ಸ್ನೇಹಗಳನ್ನು ಅಳಿಸಿಹಾಕಿತೆ? ಹಾಗಾದರೆ, ಮದುವೆಯ ಉದ್ದೇಶವೇನು? ಅರ್ಥವೇನು? ಅವರಿವರು ಹೇಳಿದ ಪುಸ್ತಕಗಳನ್ನು ಓದಿದ, ಸಿನಿಮಾಗಳನ್ನು ನೋಡಿದ. ಉತ್ತರ ಸಿಗಲಿಲ್ಲ.

ಮಗ ಹತ್ತಿರದ ಶಾಲೆಯಲ್ಲಿ ಓದಿದ. ಕಾಲೇಜು ಮೆಟ್ಟಿಲು ಏರಿದಾಗ ಅವನು ಸ್ನೇಹಿತರೊಡನೆ ನಗರದಲ್ಲಿ ಅಪಾರ್ಟ್‌ಮೆಂಟಿನಲ್ಲಿ ನೆಲೆಸಿದ. ತಾಯಿಯಿಂದ ದೂರ ಇರಬೇಕಾಯಿತು. ಒಂದೆರಡು ವರ್ಷ ಪ್ರತಿ ವಾರ ತಾಯಿಯನ್ನು ಬಂದು ನೋಡುತ್ತಿದ್ದ. ಆಗಾಗ ಫೋನ್ ಮಾಡುತ್ತಿದ್ದ.

ಸ್ಯಾಮ್ ಚೆನ್ನಾಗಿ ಓದಿದ. ಅವನ ತಂದೆ ತಾಯಿ ಇಬ್ಬರೂ ಹಣ ಒದಗಿಸುತ್ತಿದ್ದರು. ಐ.ಟಿ ಡಿಗ್ರಿ ಪಡೆದ. ಬ್ಯಾಂಕೊಂದರಲ್ಲಿ ಕೆಲಸ ಸಿಕ್ಕಿತು. ಕೈತುಂಬಾ ಸಂಬಳ. ತಾರಾ ಅಲ್ಲಿಯೇ ಕೆಲಸ ಮಾಡುತ್ತಿದ್ದಳು. ಅವಳೂ ಐ.ಟಿ ಪದವೀಧರೆ. ಜೊತೆಗೆ ರೂಪು ಬೇರೆ. ಅವಳ ತಂದೆ ಮಾಧವ ಭಟ್ ಮತ್ತು ತಾಯಿ ಶೀಲಾ ಇಲ್ಲಿಗೆ ವಲಸೆ ಬಂದವರು. ತಂದೆ ಉತ್ತಮ ಕೆಲಸದಲ್ಲಿದ್ದು ನಿವೃತ್ತಿ ಹೊಂದಿದ್ದರು. ಅವರ ಆರೋಗ್ಯ ಸರಿ ಇರಲಿಲ್ಲ. ಶೀಲಾ ಗೃಹಿಣಿ, ವ್ಯವಹಾರ ಚತುರೆ. ಮನೆಯಲ್ಲಿ

